**ದಿನಾಂಕಃ 04.03.2023**
**ಓ.ಎಸ್ ಃ 48/2015**
**ಪಿ ಡಬ್ಲ್ಯೂ ಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ 1, 4, 5, 8, 9, 11 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಎಸ್ ರವರಿಂದಃ**

ನನಗೆ ಈಗ 51 ವರ್ಷ ವಯಸ್ಸು. ನನ್ನ ಜನ್ಮ ದಿನಾಂಕ ಃ 01.06.1972. ಕುಟುಂಬ ವಂಶವೃಕ್ಷವನ್ನು ಯಾವ ದಾಖಲೆಯ ಆಧಾರದ ಮೇಲೆ ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಎಂ.ಆರ್, ಆರ್.ಟಿ.ಸಿ ಯನ್ನು ನೋಡಿ ತಯಾರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾತ ದಾಸ ಶೆಟ್ಟಿ ಮತ್ತು ದಾಸ ಶೆಟ್ಟಿಯ ಸಹೋದರರು ಒಟ್ಟಿಗೆ ಇರುವಂತಹ ದಾಖಲೆಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ಕೆಲವು ಕ್ರಯ ಪತ್ರಗಳನ್ನು ಪರಿಶೀಲನೆ ಮಾಡಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಗಳು ಯಾವ ವರ್ಷದ್ದು ಎಂದರೆ ಸಾಕ್ಷಿಯು 1964 ರದ್ದು, ಪಹಣಿ ಮತ್ತು ಫಸಲು ಪಹಣಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರು ಮಾಡಿರುವ ದಾಖಲೆಗಳಲ್ಲಿ 1964 ನೇ ಸಾಲಿನ ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಿಪಿ ಸೀರೀಸ್ ದಾಖಲೆಗಳನ್ನು ನೋಡಿ 1964 ನೇ ಇಸವಿಯ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ನಾನು ಎಷ್ಟನೇ ಮಗ ಎಂದರೆ ಸಾಕ್ಷಿಯು 7 ನೇ ಗಂಡು ಮಗ ಎಂದು ನುಡಿಯುತ್ತಾರೆ. 3 ರಿಂದ 6 ನೇ ವಾದಿಗಳು ಯಾವಾಗ ಜನಿಸಿರುತ್ತಾರೆ ಎಂದರೆ ಸರಿಯಾಗಿ ನೆನಪಿಲ್ಲ. 3 ರಿಂದ 6 ನೇ ವಾದಿಗಳು ಜನಿಸಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ನನ್ನ ತಂದೆ ತೀರಿಕೊಂಡ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿರುವುದಿಲ್ಲ ಆದರೆ 1972-73 ರಲ್ಲಿ ತೀರಿಕೊಂಡಿರಬೇಕು. ನನ್ನ ತಂದೆಯ ಸಹೋದರ ದೊಡ್ಡ ತಮ್ಮಯ್ಯ ರವರು 1967 ರಲ್ಲಿ ತೀರಿಕೊಂಡಿರುತ್ತಾರೆ. ಈ ಬಗ್ಗೆ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇರುವುದಿಲ್ಲ. ನನ್ನ ತಾತ ದಾಸಶೆಟ್ಟಿ 1934 ರಲ್ಲಿ ತೀರಿಕೊಂಡಿದ್ದು ಈ ಬಗ್ಗೆ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇರುವುದಿಲ್ಲ. ನನ್ನ ತಾತನ ಸಹೋದರರು ಈಗ ಯಾರು ಇರುವುದಿಲ್ಲ. ನನ್ನ ತಾತನ ಸಹೋದರರ ಮರಣ ಪ್ರಮಾಣ ಪತ್ರಗಳನ್ನು ಹಾಜರು

ಮಾಡಲು ತೊಂದರೆ ಇರುವುದಿಲ್ಲ. ತಾತನ ಸಹೋದರರ ಮರಣ ಪ್ರಮಾಣ ಪತ್ರಗಳನ್ನು ಹಾಜರು ಮಾಡಿದರೆ ಅವರ ತಂದೆ ತಾಯಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ನನ್ನ ತಾತನ ಸಹೋದರರು ಒಂದೇ ಕುಟುಂಬದಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು **1942** ರ ಕ್ರಯ ಪತ್ರದಲ್ಲಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಯ ಪತ್ರವನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಅದನ್ನು ಹಾಜರು ಮಾಡಲು ನನಗೆ ತೊಂದರೆ ಇರುವುದಿಲ್ಲ.

**2.** ನನ್ನ ತಾತನ ಎರಡನೇ ಸೋದರ ಯಾದಿ ಕೆಂಪಯ್ಯನ ದಾಸಿ ಉಃ ಕೆಂಪಶೆಟ್ಟಿ ಎಂದು ತೋರಿಸಲು ದಾಖಲೆಯನ್ನು ಹಾಜರು ಮಾಡಿರುತ್ತೇನಾ ಎಂದರೆ ಸಾಕ್ಷಿಯು ಅದು ಫಸಲು ಪಹಣಿಯಲ್ಲಿ ಮತ್ತು ಕ್ರಯ ಪತ್ರದಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ತಾತ ದಾಸ ಶೆಟ್ಟಿಯ ನಂತರ ಮರಿಯಾ ಉಃ ಮರಯ್ಯ ಎನ್ನುವವರು ಹುಟ್ಟಿದರು ಎಂದರೆ ಸಾಕ್ಷಿಯು ಅವರು ಮೂರನೆಯವರು ಎಂದು ನುಡಿಯುತ್ತಾರೆ. ಮೂರನೆಯವರು ಕೆಂಪಶೆಟ್ಟಿ ಮತ್ತು **4** ನೇ ಯವರು ಚಿಕ್ಕಣ್ಣಯ್ಯ ಎಂದರೆ ಸರಿ. ದಾಸ ಶೆಟ್ಟಿ, ಮರಿಯ ಉಃ ಮರಯ್ಯ, ಕೆಂಪಶೆಟ್ಟಿ ಮತ್ತು ಚಿಕ್ಕಣ್ಣಯ್ಯ ರವರ ತಂದೆಯ ಹೆಸರು ಯಾದಿ ಕೆಂಪಯ್ಯನ ದಾಸಿ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಎರಡು ಹೆಸರು ಇದೆ ಅವರನ್ನು ಕೆಂಪಶೆಟ್ಟಿ ಎಂದೂ ಕೂಡ ಕರೆಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.